# ಹಾಡೆಬಳ್ಳಿ



■ ಚಿತ್ರ- ಬರಹ:
**ಶೈಲಜಾ ಕೇಕುಣಾಜೆ**

**ಕ**ಳೆಯ ರೂಪದಲ್ಲಿ ಕಾಣುವ, ಅದ್ಭುತ ಔಷಧೀಯ ಗುಣಗಳನ್ನು ಹೊಂದಿರುವ, ಬಹೂಪಯೋಗಿ ಹಾಡೆ ಬಳ್ಳಿಯನ್ನು ಸಂಸ್ಕೃತದಲ್ಲಿ 'ಪಾಠಾ' ಎನ್ನುತ್ತಾರೆ. ಚರಕ ಮುನಿ ತನ್ನ ಸಂಹಿತೆಯಲ್ಲಿ ಇದನ್ನು ಸಂಧಾನೀಯ (healing herb), ಸ್ತನ್ಯಶೋಧನ (Lactodepurant), ಜ್ವರಹರ (Curing the fever) ಎಂದು ಉಲ್ಲೇಖಿಸಿದ್ದಾರೆ. ಮಹರ್ಷಿ ಸುಶ್ರುತ ತನ್ನ ಸಂಹಿತೆಯ ಸೂತ್ರ A-38ರಲ್ಲಿ ಇದನ್ನು ವಿಷಘ್ನ (Anti toxin)ವಾಗಿ ಗುರುತಿಸಿದ್ದಾರೆ.

ಇದರಲ್ಲಿ ಎರಡು ವಿಧದ ಸಸ್ಯಗಳನ್ನು ಕಾಣಬಹುದು. ದೊಡ್ಡ ಎಲೆಗಳ ಬಳ್ಳಿಯು ಬೃಹತ್ ಪಾಠಾ ಅಥವಾ ರಾಜ ಪಾಠಾ ವಾಗಿದ್ದು ವೈಜ್ಞಾನಿಕ ಹೆಸರು 'ಸೈಕ್ಲಿಯಾ ಪೆಲ್ಟಟಾ' (Cyclea peltata). ಸಣ್ಣ ಸಣ್ಣ ಎಲೆಗಳ ಮತ್ತೊಂದು ಲಘು ಪಾಠಾ, ವೈಜ್ಞಾನಿಕ ಹೆಸರು 'ಸಿಸಂಪೆಲಸ್ ಪರೇರಾ' (Cisampelos pareira). ಹೆಚ್ಚು ಕಡಿಮೆ ಒಂದೇ ಗುಣ, ರಚನೆ ಹಾಗೂ ಉಪಯೋಗಗಳನ್ನು ಹೊಂದಿರುವ ಇವುಗಳನ್ನು ಜನಸಾಮಾನ್ಯರು ಹಾಡೆ ಬಳ್ಳಿ ಯಾ ಅಗಳ ಶುಂಠಿ ಎಂದು ಗುರುತಿಸುತ್ತಾರೆ.

ಭಾರತ ಮತ್ತು ಶ್ರೀಲಂಕಾಗಳಲ್ಲಿ ಗೋಚರಿಸುವ ಹಾಡೆ ಬೇಲಿಬದಿಯಲ್ಲಿ, ಕುರುಚಲು ಸಸ್ಯಾವರಣದಲ್ಲಿ ಹುಟ್ಟಿ ಬಳ್ಳಿಯಾಗಿ 800-900 ಮೀಟರುಗಳವರೆಗೆ ಹಬ್ಬುತ್ತದೆ. ಇದೊಂದು ಉದ್ದವಾಗಿ ಬೆಳೆಯುವ ಬಳ್ಳಿಯಾಗಿದ್ದು ನೀಳ ಕಾಂಡದ ಸಹಾಯದಿಂದ ದೊಡ್ಡ ಮರಗಿಡಗಳ ಮೇಲೆ, ನೆಲದಲ್ಲಿ ಹರಡಿಕೊಂಡಿರುತ್ತದೆ. ಎಲೆಗಳು ಹೃದಯಾಕಾರದಲ್ಲಿದ್ದು, ಕಾಂಡದಲ್ಲಿ ವಿರುದ್ಧ ದಿಕ್ಕಿನಲ್ಲಿ ಇರುವುವು. ಇದರ ಹೂಗಳು ಏಕಲಿಂಗಿಯಾಗಿದ್ದು, ನಸು ಹಳದಿ ಬಣ್ಣವನ್ನು ಹೊಂದಿವೆ.

ಹಣ್ಣುಗಳು ದುಂಡಗೆ ಹಾಗೂ ಬೆಳ್ಳಗಿದ್ದು ಡಿಸೆಂಬರ್ ವೇಳೆಗೆ ಬಳ್ಳಿಯಲ್ಲಿ ಬಿಳಿಬಣ್ಣದ ಕಾಳುಮೆಣಸಿನ ಗಾತ್ರದ ಕಾಯಿಗಳು ದ್ರಾಕ್ಷಿಗೊಂಚಲಿನಂತೆ ಜೋತುಬಿದ್ದಿರುತ್ತವೆ. ಇದು ಹಲವು ಔಷಧೀಯ ಗುಣಗಳನ್ನು ಹೊಂದಿರುವ ಬಳ್ಳಿಯಾಗಿದ್ದು ಸೆಖೆಗಾಲದ ಹಲವು ರೋಗಗಳಿಗೆ ಈ ಸಸ್ಯದ ಎಲೆ ಮತ್ತು ಬೇರುಗಳು ಉಪಯೋಗಿಯಾಗಿವೆ.

ಈ ಬಳ್ಳಿಯ ಕುಡಿಯನ್ನು ಹುರಿದು ತಂಬುಳಿ ಮಾಡಬಹುದು. ಹುಳುಕಡ್ಡಿ, ತುರುಕಜ್ಜಿ ಇತ್ಯಾದಿಯಾದಾಗ ಇದರ ಕುಡಿಯಲೆಯನ್ನು ದೋಸೆ ಮಾಡಿ ತಿಂದರೆ ರಕ್ತಶುದ್ಧಿಯಾಗಿ ಗುಣವಾಗುವುದು. ಆಸಿಡಿಟಿ ಹೆಚ್ಚಾದಾಗ ಇದರ 4-5 ಎಲೆಗಳನ್ನು ನೀರಿಗೆ ಬೆರೆಸಿ ಕಿವುಚಿ ಸಕ್ಕರೆ ಬೆರೆಸಿ ಕುಡಿಯಬೇಕು. ಎಲೆಗಳನ್ನು ಕಿವುಚಿದಾಗ ಬರುವ ಲೋಳೆಯನ್ನು ತಲೆಗೆ ಮೆತ್ತಿಕೊಂಡು ಮಲಗಿದರೆ ಉಷ್ಣದ ತಲೆನೋವು ಕಡಿಮೆಯಾಗುವುದು. ಹಾಡೆ ಎಲೆಯನ್ನು ನೀರಲ್ಲಿ ನೆನೆಸಿ ಹಿಂಡಿ ತಯಾರಿಸಿದ ಅಂಟಾದ ಲೋಳೆ ಕಣ್ಣಿಗೆ ತಂಪು. ಇದರ ಗೊಂಪು ಕೂಡಾ ತಲೆಗೆ ತುಂಬಾ ತಂಪನ್ನು ನೀಡುತ್ತದೆ.



ಹಾಡೆ ಬೇರನ್ನು ಅರೆದು ಲೇಪಿಸುವುದರಿಂದ ಹುಣ್ಣುಗಳು ಗುಣವಾಗುತ್ತವೆ. ಇದರ ಬೇರಿನ ಕಷಾಯವನ್ನು 15-30 ಮಿ.ಲೀ ಯಂತೆ ದಿನದ 3 ಹೊತ್ತು ಒಂದು ವಾರ ಸೇವಿಸಿದರೆ ಮೂತ್ರಕಟ್ಟು, ಮಲಬದ್ಧತೆ ನಿವಾರಣೆ ಆಗುತ್ತದೆ. ಸೊಂಟನೋವು, ಅಜೀರ್ಣದ ಹೊಟ್ಟೆನೋವಿಗೆ ಇದೇ ಕಷಾಯವನ್ನು 30 ಮಿಲಿಯಷ್ಟು 3 ದಿನ ಸೇವಿಸಬೇಕು. ಗರ್ಭಿಣಿಯರಿಗೆ ಈ ಕಷಾಯ ಗರ್ಭಕೋಶದ ಟಾನಿಕ್ ಆಗಿದ್ದು ಹೊಟ್ಟೆನೋವು, ವಾಯು ಶಮನ ಮಾಡುತ್ತದೆ. ಶಿಶುಗಳಿಗೆ ಭೇದಿ ಶುರುವಾದಾಗ ಇದರ ಬೇರು ತೇಯ್ದು ಗಂಧ ಮಾಡಿ ಎದೆಹಾಲಿನಲ್ಲಿ ನೆಕ್ಕಿಸಬೇಕು. ಬೇರಿನಿಂದ ಮಾಡಿದ ಎಣ್ಣೆ ಕಾಲು ಬೆರಳುಗಳೆಡೆಯ ಹುಳ ತಿನ್ನುವುದನ್ನು ಇಲ್ಲವಾಗಿಸುತ್ತದೆ. ●

